# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಕೆ. ನಾಗರಾಜ್ | **ಪಿಡಬ್ಲ್ಯೂ.08** |
| **ತಂದೆಯ ಹೆಸರು** | : | ಕೆಂಚಪ್ಪ | **ಸಿಡಬ್ಲ್ಯೂ.12** |
| **ವಯಸ್ಸು** | : | **56 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಬ್ಯಾಡರಹಳ್ಳಿ ಗ್ರಾಮದ ಪ್ರಭಾರ ಗ್ರಾಮಲೆಕ್ಕಾಧಿಕಾರಿ | **ದಿನಾಂಕ: 04.09.2018** |
| **ವಾಸಸ್ಥಳ** | : | ಬ್ಯಾಡರಹಳ್ಳಿ. | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

2014 ರಲ್ಲಿ ಬ್ಯಾಡರಹಳ್ಳಿ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿರುತ್ತೇನೆ. ನಾನು ಈಗ ನಿವೃತ್ತಿ ಹೊಂದಿರುತ್ತೇನೆ. ದಿ: 07.06.2014 ರಂದು ನಾನು ಕರ್ತವ್ಯದಲ್ಲಿದ್ದಾಗ ನಮ್ಮ ಮೇಲಾಧಿಕಾರಿ ಅಂದರೆ ಕಂದಾಯ ನಿರೀಕ್ಷಕರು ಮಾಹಿತಿ ಕೊಟ್ಟು ನೀನು ಚಿತ್ರದುರ್ಗ ಲೋಕಾಯುಕ್ತ ಪೊಲೀಸರಿಗೆ ಪಂಚರಾಗಿ ಸಹಕರಿಸಬೇಕು ಅಂತ ತಿಳಿಸಿದರು. ಆ ಪ್ರಕಾರ ನಾನು, ಸಿಡಬ್ಲೂ–72 ಸತ್ಯನಾರಾಯಣ, ಪಿಐ ಇವರ ಜೊತೆಗೆ ಪಂಚರಾಗಿ ಸಹಕರಿಸಿರುತ್ತೇನೆ. ಆ ಸಮಯದಲ್ಲಿ ಸಾಕ್ಷಿದಾರರಾದ ಸಿಡಬ್ಲ್ಯೂ–10 ತಿಪ್ಪೇಸ್ವಾಮಿ, ಸಿಡಬ್ಲ್ಯೂ–11 ಇಮ್ರಾನ್ ಪಂಚರಾಗಿ ಹೂವಿನಹೊಳೆ ಗ್ರಾಮದ ಸರ್ವೆ ನಂ.62/2 ಜಮೀನಿಗೆ ಬಂದಿದ್ದರು. ಆ ವೇಳೆಯಲ್ಲಿ ನಾನು ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರಿಂದ ಅವರೆಲ್ಲರಿಗೂ ನಾನು ಜಮೀನು ಸರ್ವೆ ನಂ. 62/2 ನ್ನು ತೋರಿಸಿರುತ್ತೇನೆ. ಆ ಜಮೀನಿನಲ್ಲಿ ಅಡಿಕೆ, ತೆಂಗು ಸಸಿ ಇದ್ದವು. ಆ ಜಮೀನು ಅಂದರೆ 11 ಎಕರೆ 16 ಗುಂಟೆ, ಪಕ್ಕದ 5 ಎಕರೆ 29 ಗುಂಟೆ ಜಮೀನಿಗೆ ಕಲ್ಲಿನ ಕಂಬ ತಂತಿ ಹಾಕಿಸಿದ್ದರು. ಅಲ್ಲಿ ಯಾವುದೇ ಬೆಳೆ ಇರಲಿಲ್ಲ.

2. ದಿ: 07.06.2014 ರಂದು ನಾವು ಪೊಲೀಸರು ಹೋದಾಗ ಅಲ್ಲಿ ಲೋಕಾಯುಕ್ತ ಪೊಲೀಸರು ನಿಪಿ–12 ರ ಪ್ರಕಾರ ಮಹಜರ್ ಮಾಡಿ ನನ್ನ ಸಹಿ ತೆಗೆದುಕೊಂಡಿದ್ದಾರೆ. ಸಾಕ್ಷಿ ಸಹಿಯನ್ನು ನಿಪಿ–12(ಸಿ) ಅಂತ ಗುರುತಿಸಲಾಯಿತು.

**ಆರೋಪಿತರ ಪರ ಶ್ರೀ ಎಸ್.ಹೆಚ್. ವಕೀಲರಿಂದಃ ಪಾಟೀ ಸವಾಲುಃ**

3. ಸರ್ವೆ ನಂ .62/2 ಪಕ್ಕದ 5 ಎಕರೆ 29 ಗುಂಟೆ ಜಮೀನಿನ ಸರ್ವೆ ನಂ.62 ಇರುತ್ತದೆ . ನಿಪಿ–12 ಮಹಜರಿನಲ್ಲಿ ಕ್ಷೇತ್ರ 5 ಎಕರೆ 29 ಗುಂಟೆಯ ಜಮೀನು ಸರ್ವೆ ನಂಬರ್ ಬರೆದಿರುವುದಿಲ್ಲ . ನಾನು ಹೇಳುವಂತಹ ತಂತಿ ಬೇಲಿ ಅದು ಸರ್ವೆ ನಂ . 62 ರ ಒಟ್ಟು ಕ್ಷೇತ್ರ 27 ಎಕರೆಗೆ ಸಂಬಂಧಿಸಿದ್ದು ಇರುತ್ತದೆ ಎನ್ನುವುದು ಸುಳ್ಳು . ಅದೇ ರೀತಿ ನಾವು ಸ್ಥಳಕ್ಕೆ ಹೋದಾಗ ಅಕ್ಕಪಕ್ಕದವರು ಬೇರೆ ಒಟ್ಟು 27 ಎಕರೆಗೆ ತಂತಿ ಬೇಲಿ ಇದೆ ಅಂತ ಹೇಳಿದರು ಎನ್ನುವುದು ಸುಳ್ಳು . ನಾನು ಹೇಳುವ ಹಾಗೆ ಕೇವಲ 11 ಎಕರೆ , 5 ಎಕರೆ 29 ಗುಂಟೆಗೆ ತಂತಿ ಬೇಲಿ ಇರುವುದಿಲ್ಲ , ಒಟ್ಟು 27 ಎಕರೆಗೆ ಇದೆ ಎನ್ನುವುದು ಸುಳ್ಳು . ಆ ತಂತಿ ಬೇಲಿಯನ್ನು ಆರೋಪಿ–1 ರಾಜಣ್ಣ ಹಾಕಿಸಿದ್ದನೋ ಬೇರೆಯವರು ಹಾಕಿಸಿದ್ದಾರೋ ಎನ್ನುವುದು ನನಗೆ ಗೊತ್ತಿಲ್ಲ .

4. 2 ಬೋರ್ ಗಳನ್ನು ಆರೋಪಿ–1 ರಾಜಣ್ಣ ಹಾಕಿಸಿದ್ದಾರೆ . ಆ ಬೋರ್ ಗಳನ್ನು ಯಾವ ವರ್ಷ ಹಾಕಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ . ಆ 2 ಬೋರ್ ಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ . ತಂತಿ ಬೇಲಿಗೆ ಎಷ್ಟು ಹಣ ಖರ್ಚು ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ .

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿತ್ರದುರ್ಗ.**